ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

ಓ.ಎಸ್ ಸಂಖ್ಯೆ. 991/2022 ಪಿ.ಡಬ್ಲೂ .1

ದಿನಾಂಕಃ 27-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ನಾನು ಈ ಪ್ರಕರಣದಲ್ಲಿ ವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿದ್ದು ಅದರಲ್ಲಿನ ಸಹಿ ನನ್ನದೇ ಆಗಿರುತ್ತದೆ.

ಮುಖ್ಯ ವಿಚಾರಣೆಃ- ವಾದಿ ಪರ ವಕೀಲರಿಂದಃ

ನಿಪಿ. 1 ದಿನಾಂಕಃ 05-01-2022 ರ ಅಸಲು ಕ್ರಯ ಪತ್ರ.

ನಿಪಿ.2 ದಿನಾಂಕಃ 16-04-2016 ರ ಅಸಲು ಕರಾರು ಪತ್ರ. ಸದರಿ ದಾಖಲೆಗೆ 1 ನೇ ಪ್ರತಿವಾದಿ ಹೆಬ್ಬೆಟ್ಟಿನ ಗುರುತು ಹಾಕಿದ್ದು 2 ನೇ ಪ್ರತಿವಾದಿ ಮತ್ತು ನಾನು ಸಹಿ ಮಾಡಿರುತ್ತೇವೆ. ಸಾಕ್ಷಿಯಾಗಿ ಚೆನ್ನಪ್ಪ ಮತ್ತು ವೆಂಕಟೇಶ್ ಸಹಿ ಮಾಡಿದ್ದು, ಲಕ್ಷ್ಮಣ ರವರು ಪತ್ರ ಬರೆದಿರುತ್ತಾರೆ. ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ. 2(ಎ) ಯಿಂದ (ಇ) ಎಂದು ಗುರುತಿಸಲಾಯಿತು.

ನಿಪಿ. 3 ರಿಂದ 14 ಪಹಣಿಗಳು.

ನಿಪಿ. 15 ನೋಟಿಸಿದ ಕಛೇರಿ ಪ್ರತಿ.

ನಿಪಿ. 16 -17 ಅಂಚೆ ರಶೀದಿಗಳು.

ನಿಪಿ. 18 -19 ಅಂಚೆ ಸ್ವೀಕೃತಿಗಳು.

ನಿಪಿ. 20 ಇಸಿ.

ಆದ್ದರಿಂದ ದಾವೆಯಲ್ಲಿ ಬೇಡಿರುವಂತೆ ಡಿಕ್ರೀ ಮಾಡಬೇಕಾಗಿ ಪ್ರಾರ್ಥನೆ.

ಪಾಟೀ ಸವಾಲು ಕಾಲಾವಕಾಶ ಕೋರಿದ್ದು ನೀಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.